**ಸಾಕ್ಷಿಯನ್ನು ದಿನಾಂಕಃ 07.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಎ.ಎಂ.ಎಂ. ವಕೀಲರಿಂದಃ**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ 03 ಜನ ಗಂಡು ಮಕ್ಕಳಿರುತ್ತಾರೆ. ಅವರಲ್ಲಿ ಒಬ್ಬ 10 ನೇ ತರಗತಿಯವರೆಗೆ ಓದಿದ್ದು, ಇನ್ನೊಬ್ಬ 9 ನೇ ತರಗತಿ ಹಾಗು ಮತ್ತೊಬ್ಬ 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಅವರು ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ. ನನಗೆ 01 ಎಕರೆ ಜಮೀನು ಇರುತ್ತದೆ. ನಾನು ದಿನಾಂಕಃ 10.02.2022 ರಂದು ನಮ್ಮ ಹಾಗು ವಾದಿಯ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಒಪ್ಪಂದ ಪತ್ರವಾಗಿದ್ದು ಸದರಿ ಪತ್ರದಡಿಯಲ್ಲಿ ವಾದಿ ನಮಗೆ ಒಟ್ಟು ಕ್ರಯದ ಪ್ರತಿಫಲ ರೂ. 3,00,000/- ಗಳ ಪೈಕಿ ರೂ. 2,50,000/- ಗಳನ್ನು ಮುಂಗಡ ಹಣ ನೀಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರೂ. 1,00,000/- ವನ್ನು ಪಡೆದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಸದರಿ ದಿನದಂದು ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ನಾವು ವಾದಿಯಿಂದ ರೂ. 2,50,000/- ಮುಂಗಡ ಹಣ ಪಡೆದು ಸದರಿ ಕ್ರಯದ ಕರಾರು ಒಪ್ಪಂದ ಪತ್ರ ಬರೆದುಕೊಟ್ಟಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವ್ಯವಸಾಯ ಖರ್ಚಿಗಾಗಿ ವಾದಿಯಿಂದ ರೂ. 1,00,000/- ಗಳನ್ನು ಸಾಲ ಪಡೆದುಕೊಂಡಿದ್ದು ಅದಕ್ಕೆ ಅವರು ಆಧಾರ ಪತ್ರ ಬರೆದುಕೊಡಬೇಕೆಂದು ತಿಳಿಸಿದ್ದರಿಂದ ಸಹಿ ಮಾಡಿರುತ್ತೇವೆಂದು ನುಡಿಯುತ್ತಾರೆ. ಸದರಿ ದಿನದಂದು ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ಕ್ರಯದ ಕರಾರು ಒಪ್ಪಂದ ಕರಾರು ಪತ್ರ ಬರೆದುಕೊಟ್ಟ ಬಗ್ಗೆ ನಿ.ಪಿ.-1 ಕ್ರಯದ ಕರಾರು

ಒಪ್ಪಂದ ಪತ್ರದಲ್ಲಿ ನಮ್ಮ ಸಹಿ ಹಾಗು ಫೋಟೋ ಇರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಆಧಾರ ಪತ್ರವೆಂದು ಸಹಿ ಮಾಡಿರುತ್ತೇವೆಂದು ನುಡಿಯುತ್ತಾರೆ. ಸದರಿ ನಿ.ಪಿ.–1 ಕ್ರಯ ಒಪ್ಪಂದ ಕರಾರು ಪತ್ರದಲ್ಲಿ ಉಳಿಕೆ ರೂ. 50,000/– ಹಣವನ್ನು ಕ್ರಯ ಪತ್ರ ನೋಂದಣಿ ಮಾಡಿಕೊಡುವ ಸಮಯದಲ್ಲಿ ಪಡೆದುಕೊಳ್ಳುವುದಾಗಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಾನು ಹಾಗು ನನ್ನ ಮಕ್ಕಳು ವಿದ್ಯಾವಂತರಾಗಿದ್ದು ನಿ.ಪಿ.–1 ಕ್ರಯದ ಕರಾರು ಪತ್ರವನ್ನು ವಾದಿಗೆ ಬರೆದು ನೋಂದಣಿ ಮಾಡಿಕೊಟ್ಟು ಈಗ ಆಧಾರ ಪತ್ರ ಬರೆದುಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ನಿ.ಪಿ.–1 ಕ್ರಯ ಒಪ್ಪಂದ ಕರಾರು ಪತ್ರದಲ್ಲಿ ತಿಳಿಸಿರುವ ಅವಧಿಯಂತೆ ನಾನು ವಾದಿಗೆ ಕ್ರಯ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಅವರಿಗೆ ಯಾವುದೇ ಕ್ರಯದ ಕರಾರು ಒಪ್ಪಂದ ಪತ್ರ ಬರೆದುಕೊಟ್ಟಿರುವುದಿಲ್ಲ ಬದಲಾಗಿ ಕೇವಲ ಆಧಾರ ಪತ್ರವನ್ನು ಮಾತ್ರ ಬರೆದುಕೊಟ್ಟಿರುತ್ತೇವೆಂದು ನುಡಿಯುತ್ತಾರೆ.

**<u>ಮರು ವಿಚಾರಣೆಃ ಇಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**